RNU AIR DHARWAD

MARCH 08, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಸಮ ಸಮಾಜದ ಆಶಯ; 4 ಲಕ್ಷ 9 ಸಾವಿರದ 549 ಕೋಟಿ ರೂಪಾಯಿ, ಮುಂಗಡ ಪತ್ರ ಮಂಡಿಸಿದ, ಮುಖ್ಯಮಂತ್ರಿ ಸಿದ್ದರಾಮಯ್ಯ.**
- **'ಕಡಿಮೆ ಬೆಲೆ; ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, 'ಜನೌಷಧಿ ಸಪ್ತಾಹ' ಸಂಪನ್ನ.**
- **ಇಂದು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ಮಹಿಳೆಯ ಸಾಧನೆ ಸಂಭ್ರಮಿಸುವ ದಿನ.**
- **ಇಂದು, ರಾಷ್ಟ್ರೀಯ ಲೋಕ್ ಅದಾಲತ್; ರಾಜೀ ಸಂಧಾನದ ಪ್ರಕರಣಗಳ ವಿಚಾರಣೆ.**
- **ಕೇಂದ್ರ ಸಾಹಿತ್ಯ ಅಕಾದೆಮಿ ಅನುವಾದ ಪುರಸ್ಕಾರಕ್ಕೆ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಭಾಜನ.**

<><><>

**ಈಗ ವಾರ್ತೆಗಳ ವಿವರ**

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ, ಒಟ್ಟು 4 ಲಕ್ಷದ 9 ಸಾವಿರದ 549 ಕೋಟಿ ರೂಪಾಯಿ, ದಾಖಲೆ ಮೊತ್ತದ ಮುಂಗಡ ಪತ್ರವನ್ನು, ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಸಮ ಸಮಾಜದ ಆಶಯದೊಂದಿಗೆ, ತಮ್ಮ 16ನೇ ಆಯ-ವ್ಯಯವನ್ನು ರಾಜ್ಯದ ಜನತೆಯ ಮುಂದಿಡುತ್ತಿರುವುದಾಗಿ ಅವರು ಹೇಳಿದರು.**

<><><>

**ಕೃಷಿ, ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ, ಮೂಲಸೌಕರ್ಯ, ಇಂಧನ ಸೇರಿದಂತೆ, ಹಲವು ಕ್ಷೇತ್ರಗಳಿಗೆ ಪ್ರಾಶಸ್ತ್ಯ ನೀಡಿ, ಅನುದಾನವನ್ನು ಮೀಸಲಿಟ್ಟಿದ್ದಾಗಿ, ಪ್ರಕಟಿಸಿದರು.**

<><><>

**ಪ್ರಸಕ್ತ ಹಣಕಾಸು ವರ್ಷದಲ್ಲಿ, 1 ಲಕ್ಷದ 16 ಸಾವಿರ ಕೋಟಿ ರೂಪಾಯಿ ಸಾಲ ಪಡೆಯಲು ಸರ್ಕಾರ ನಿರ್ಧರಿಸಿದೆ. ಈ ಹಣಕಾಸು ವರ್ಷಾಂತ್ಯಕ್ಕೆ, ರಾಜ್ಯದ ಒಟ್ಟಾರೆ ಸಾಲ, 7 ಲಕ್ಷ 64 ಸಾವಿರದ 655 ಕೋಟಿ ರೂಪಾಯಿಗೆ ಏರಿಕೆಯಾಗಲಿದೆ.. ಒಟ್ಟು 2 ಲಕ್ಷ 92 ಸಾವಿರದ 477 ಕೋಟಿ ರೂಪಾಯಿಗಳ ರಾಜಸ್ವ ನಿರೀಕ್ಷಿಸಲಾಗಿದೆ.**

ಈ ಪೈಕಿ ರಾಜ್ಯದ ಸ್ವಂತ ತೆರಿಗೆ ರಾಜಸ್ವ ಪ್ರಮಾಣ, 2 ಲಕ್ಷದ 8 ಸಾವಿರದ 100 ಕೋಟಿ ರೂಪಾಯಿ ಸಂಗ್ರಹದ ನಿರೀಕ್ಷೆ ಇದೆ ಎಂದು, ಹಣಕಾಸು ಖಾತೆ ಸಚಿವ ಸಿದ್ದರಾಮಯ್ಯ ತಿಳಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 40 ಸೆಕೆಂದುಗಳು

<><><>

ಕೃಷಿ ವಲಯದ ಸುಸ್ಥಿರ ಅಭಿವೃದ್ಧಿಗಾಗಿ, ಪ್ರಸಕ್ತ ಬಜೆಟ್‌ನಲ್ಲಿ, ರೈತ ಪರ ಯೋಜನೆಗಳಿಗಾಗಿ, 51 ಸಾವಿರದ 339 ಕೋಟಿ ರೂಪಾಯಿ, ಅನುದಾನ ಮೀಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

<><><>

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ, ರಾಜ್ಯ ಸರ್ಕಾರ, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳಿಗೆ ಆದ್ಯತೆ ನೀಡಿದೆ; ತುಂತುರು, ಹನಿ ನೀರಾವರಿ ಹಾಗೂ ಕೃಷಿ ಹೊಂಡಗಳ ಯೋಜನೆ ಮೂಲಕ, ರಾಜ್ಯದ ಬಹುತೇಕ ಭಾಗಗಳ ಮಳೆಯಾಶ್ರಿತ ರೈತರಿಗೆ ಹೆಚ್ಚಿನ ಸಹಾಯವಾಗಲಿದೆ ಎಂದು, ಅಭಿಪ್ರಾಯಪಟ್ಟಿದ್ದಾರೆ, ಮಂಗಳೂರಿನ ಸಾವಯವ ಕೃಷಿಕ–ಗ್ರಾಹಕ ಬಳಗದ ಗೌರವ ಅಧ್ಯಕ್ಷ, ಕೃಷಿ ಅರ್ಥಶಾಸ್ತ್ರಜ್ಞ, ಅಡ್ಡೂರು ಕೃ ಷ್ಣರಾವ್.

<><><>

ಅಡ್ಡೂರು ಕೃ ಷ್ಣರಾವ್ ಧ್ವನಿ 60 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಒತ್ತಾಸೆಯ ಮೇರೆಗೆ ಆರಂಭಿಸಲಾದ, 'ಜನೌಷಧಿ' ಯೋಜನೆಯ 7ನೇ ವಾರ್ಷಿಕೋತ್ಸವವನ್ನು, 'ಕಡಿಮೆ ಬೆಲೆ; ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, ಶುಕ್ರವಾರ "ಜನ್ ಔ ಷಧಿ ದಿನ", ಆಚರಿಸಲಾಯಿತು.

<><><>

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರಾದ, ಶೋಭಾ ಕರಂದ್ಲಾಜೆ ಬೆಂಗಳೂರಿನ ಯಶವಂತಪುರದ, ಜನೌ ಷಧಿ ಕೇಂದ್ರಕ್ಕೆ ಭೇಟಿ ನೀಡಿ, ಗ್ರಾಹಕರು ಹಾಗೂ ಕೇಂದ್ರದ ಸಂಚಾಲಕರೊಂದಿಗೆ ಸಂವಾದ ನಡೆಸಿದರು.

<><><>

ಜನೌಷಧಿಗಳಿಂದ ಶ್ರೀ ಸಾಮಾನ್ಯರಿಗಿರುವ ಲಾಭಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ವೈದ್ಯ, ಕರ್ನಾಟಕ ಡ್ರಗ್ ಆಕ್ಷನ್ ಫೋರಮ್ ಸಂಚಾಲಕ, ಡಾಕ್ಟರ್ ಗೋಪಾಲ ದಾಬಡೆ.

<><><>

ಡಾ. ಗೋಪಾಲ ದಾಬಡೆ ಧ್ವನಿ 50 ಸೆಕೆಂದುಗಳು

<><><>

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಹೆಣ್ಣು ಮಕ್ಕಳ ಸಾಧನೆಯನ್ನು ಗುರುತಿಸಿ, ಗೌರವಿಸುವ ಮತ್ತು ಮಹಿಳಾ ಸಮಾನತೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ, ಇಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು, ದೇಶಾದ್ಯಂತ 'ಕ್ರಿಯೆಯ ವೇಗವರ್ಧಿಸಿ' ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

ನೈಋತ್ಯ ರೈಲ್ವೆ, ಮಹಿಳಾ ಸಮಾನತೆ ಹಾಗೂ ಸಬಲೀಕರಣದ ಭಾಗವಾಗಿ, ಇಂದು ಬೆಳಗ್ಗೆ 10:30ಕ್ಕೆ ಮೈಸೂರಿನಿಂದ ಹೊರಡುವ, ಮೈಸೂರು-ಜೈಪುರ ಎಕ್ಸ್‌ಪ್ರೆಸ್ ಹಾಗೂ ಮಧ್ಯಾಹ್ನ 1:50ಕ್ಕೆ ಬೆಂಗಳೂರಿನಿಂದ ಹೊರಡುವ, ಕೆ.ಎಸ್.ಆರ್ ಬೆಂಗಳೂರು-ಮೈಸೂರು ಮಾಲ್ಗುಡಿ ಎಕ್ಸ್‌ಪ್ರೆಸ್ ಅನ್ನು, ಸಂಪೂರ್ಣ ಮಹಿಳಾ ಸಿಬ್ಬಂದಿ ಓಡಿಸಲಿದ್ದಾರೆ.

<><><>

ಡಾಕ್ಟರ್ ಗೋಪಾಲ ಕಮಲಾಪೂರ ನೇತೃತ್ವದ, ಧಾರವಾಡದ, ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ, ಫ್ಯಾ ’ನ್ ಡಿಸೈನಿಂಗ್ ತರಬೇತಿ ಪಡೆದಿರುವ, ಹುಟ್ಟಿನಿಂದ ಶ್ರವಣ ದೋಷವುಳ್ಳ, ಅನುರಾಧಾ ಸೂಸಿಮಠ, ಈಗ ಆರ್ಥಿಕವಾಗಿ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ತರಬೇತಿದಾರರಾದ ಲತಾ ಬಾಕಳೆ, ಅನುರಾಧಾ ಅವರ ಸಾಧನೆ ವಿವರಿಸಿದ್ದಾರೆ.

<><><>

ಲತಾ ಬಾಕಳೆ ಧ್ವನಿ 28 ಸೆಕೆಂದುಗಳು

<><><>

ಕೇಂದ್ರ ಸಾಹಿತ್ಯ ಅಕಾದೆಮಿ ಅನುವಾದ ಪುರಸ್ಕಾರಕ್ಕೆ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ, 'ವಿದಿಶಾ ಪ್ರಹಸನ' ಕೃತಿ ಆಯ್ಕೆಯಾಗಿದೆ. ಇದು, ಕವಿ ಕಾಳಿದಾಸ ವಿರಚಿತ 'ಮಾಲವಿಕಾಗ್ನಿಮಿತ್ರಮ್' ಕೃತಿಯ ರಂಗಾನುವಾದ. ಅಕಾದೆಮಿ ಅಧ್ಯಕ್ಷ ಮಾಧವ ಕೌಶಿಕ್ ನೇತೃತ್ವದ ಕಾರ್ಯಕಾರಿ ಸಮಿತಿ, 21 ಭಾಷೆಗಳ ಲೇಖಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿ, 50 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಪ್ರದೇಶ ಸಮಾಚಾರಕ್ಕಾಗಿ, ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಧ್ವನಿ 30 ಸೆಕೆಂದುಗಳು

<><><>

ಹೊಸ ದಿಲ್ಲಿಯ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಬೆಂಗಳೂರು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ, ಇಂದು, ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ 'ಲೋಕ್ ಅದಾಲತ್' ಏರ್ಪಡಿಸಲಾಗಿದೆ.

ಇಂದು ಬೆಳಗ್ಗೆ 11 ಗಂಟೆಗೆ ಆರಂಭವಾಗಲಿರುವ ಜನತಾ ನ್ಯಾಯಾಲಯದಲ್ಲಿ, ಪರಸ್ಪರ ರಾಜೀ ಸಂಧಾನದ ಮೂಲಕ, ಇತ್ಯರ್ಥ ಪಡಿಸಬಹುದಾದ, ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು, ವಿಚಾರಣೆಗೆ ನಿಗದಿ ಪಡಿಸಲಾಗಿದೆ.

<><><>

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ, ರಾಜ್ಯದ ಎಲ್ಲ ಜಿಲ್ಲಾ ನ್ಯಾಯಾಲಯಗಳಲ್ಲಿ, ಎಲ್ಲ ಪ್ರಕರಣಗಳ ಸಂಧಾನಕ್ಕೆ, ಮಹಿಳಾ ವಕೀಲರನ್ನು ನೇಮಿಸಲಾಗಿದೆ.

<><><>

ಆಕಾಶವಾಣಿ ಮೈಸೂರು ಕೇಂದ್ರ, ಸಾರ್ಥಕ ಸೇವೆಯ, 90 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆ, ಪ್ರಸಾರ ಭಾರತಿ ಸಹಯೋಗದಲ್ಲಿ, ಮೈಸೂರಿನ ಯಾದವಗಿರಿಯ, ಆಕಾಶವಾಣಿ ಕೇಂದ್ರದ ಆವರಣದಲ್ಲಿ, 'ನುಡಿ ನಾದ ಸಂಗಮ' ವಿಶೇಷ ಕಾರ್ಯಕ್ರಮ ಜರುಗಿತು. ಆಕಾಶವಾಣಿ ಸುದ್ದಿ ವಿಭಾಗದ ಮಹಾ ನಿರ್ದೇಶಕಿ, ಹೊಸ ದಿಲ್ಲಿಯ ಡಾಕ್ಟರ್ ಪ್ರಜ್ಞಾ ಪಾಲೀವಾಲ್ ಗೌರ್, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹಿರಿಯ ವಿದ್ವಾಂಸ ಟಿ.ವಿ.ವೆಂಕಟಾಚಲಶಾಸ್ತ್ರಿ ಹಾಗೂ ಎಂ.ವಿ. ಗೋಪಾಲಸ್ವಾಮಿ ಮತ್ತು ನಾ. ಕಸ್ತೂರಿ ಕುಟುಂಬದವರು, ವಿಶೇಷ ಆಹ್ವಾನಿತರು ಪಾಲ್ಗೊಂಡಿದ್ದರು.

<><><>

ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ, 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ' ಮಾದರಿಯಲ್ಲಿ, ಸಾವಿರ ಕೋಟಿ ರೂಪಾಯಿ ವೆಚ್ಚದ, ಸಾವಿರದ ನೂರಾ 66 ಕಿಲೋ ಮೀಟರ್ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಗೆ, 'ಕಲ್ಯಾಣ ಪಥ ಯೋಜನೆ' ಅಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು, ಚಾಲನೆ ನೀಡಲಿದ್ದಾರೆ. ಇಂದು ಬೆಳಗ್ಗೆ 11.30ಕ್ಕೆ, ಕಲಬುರಗಿ ಜಿಲ್ಲೆ, ಜೇವರ್ಗಿ ತಾಲೂಕಿನ, ಕಟ್ಟಿ ಸಂಗಾವಿಯ, ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಸಮೀಪ, ಕಾರ್ಯಕ್ರಮ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಮ ಸಮಾಜದ ಆಶಯ; 4 ಲಕ್ಷ 9 ಸಾವಿರದ 549 ಕೋಟಿ ರೂಪಾಯಿ, ಮುಂಗಡ ಪತ್ರ ಮಂಡಿಸಿದ, ಮುಖ್ಯಮಂತ್ರಿ ಸಿದ್ದರಾಮಯ್ಯ.
- 'ಕಡಿಮೆ ಬೆಲೆ; ಅತ್ಯುತ್ತಮ ಔಷಧ' ಧ್ಯೇಯದೊಂದಿಗೆ, 'ಜನೌಷಧಿ ಸಪ್ತಾಹ' ಸಂಪನ್ನ.
- ಇಂದು, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ಮಹಿಳೆಯ ಸಾಧನೆ ಸಂಭ್ರಮಿಸುವ ದಿನ.
- ಇಂದು, ರಾಷ್ಟ್ರೀಯ ಲೋಕ್ ಅದಾಲತ್; ರಾಜೀ ಸಂಧಾನದ ಪ್ರಕರಣಗಳ ವಿಚಾರಣೆ.
- ಕೇಂದ್ರ ಸಾಹಿತ್ಯ ಅಕಾದೆಮಿ ಅನುವಾದ ಪುರಸ್ಕಾರಕ್ಕೆ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>